## ಲಂಚ್ ಲಂಚ ಆದಾಗ...

ಬೆಳಗ್ಗೆ ಕೊಂಚ ತಡವಾಗಿ ಎದ್ದರೂ ಚಿಂಟು ಶಾಲೆಯ ಸಮಯಕ್ಕೆ ಸರಿಯಾಗಿ ಹೊರಡಲು ಸಿದ್ಧನಾಗಿದ್ದ. ಟಿಫನ್ ಆಗಲೇ ಮುಗಿಸಿದ್ದ. ಅಮ್ಮನ ಹತ್ತಿರ ಬಂದು ಅಮ್ಮ ಸ್ಕೂಲ್‌ಗೆ ಟೈಮ್ ಆಯ್ತು ಲಂಚ್( Lunch) ಕೊಡು ಎಂದು ಕೇಳಿದ. ತಾಯಿ ಬೇರೆ ಕೆಲಸ ಮಾಡುತ್ತಿದ್ದ ಕಾರಣ, ಅಜ್ಜಿಯ ಹತ್ತಿರ ತಗೋ ಎಂದು ಹೇಳಿ ಕಳುಹಿಸಿದರು.

ಓಡಿ ಬಂದ ಚಿಂಟು, 'ಅಜ್ಜಿ ನಾನು ಸ್ಕೂಲಿಗೆ ಹೊರಟೆ, ಲಂಚ್ (Lunch) ಕೊಡು' ಎಂದ. ಅದಕ್ಕೆ ಅಜ್ಜಿ, 'ನೀನು ಶಾಲಿಗೆ ಹೋಗಕೆ ನಾನ್ ಯಾಕ್ ಲಂಚ ಕೊಡ್ಬೇಕು ಹೋಗಾ' ಎಂದಾಗ, ತಾಯಿ– ಮಗ ಇಬ್ಬರು ಮುಖಮುಖ ನೋಡಿಕೊಂಡು ನಕ್ಕರು.

**ದೀಪಶ್ರೀ ಎಸ್ ಕೂಡ್ಲಿಗಿ**



## ಗೋಸುಂಬೆ ಅಲ್ಲ!

ಆ ಕಂಪನಿಯ ಪಾರ್ಟಿಗೆ ಕಳೆದ ಎರಡು ವರ್ಷಗಳಿಂದಲೂ ಬರುತ್ತಿದ್ದ ಸೌಂದರ್ಯವತಿ ಗೌರಿಯು ಈ ಸಲವು ಬರುವಳೆಂಬ ಖಾತ್ರಿಯ ಮೇಲೆ ಧನಂಜಯನು ಆ ಪಾರ್ಟಿಗೆ ಬಂದಿದ್ದ.

ಆಕೆಯನ್ನು ನೋಡಿದ ಧನಂಜಯ ಅವಳ ಬಳಿ ಹೋಗಿ, 'ಮೇಡಂ ಇವತ್ತು ಬಹಳ ಚೆನ್ನಾಗಿ ಕಾಣುತ್ತಿದ್ದೀರಿ' ಎಂದ. ಆಕೆ, 'ಥ್ಯಾಂಕ್ಸ್' ಎಂದಳು.

ಆತ ಮಾತು ಮುಂದುವರಿಸಿ, 'ಮೇಡಂ ಈಗ ನಿಮ್ಮ ವಯಸ್ಸೆಷ್ಟು?' ಎಂದು ಕೇಳಿದ.

ಆಕೆ 'ಈಗ ನನಗೆ 21 ವರ್ಷಗಳು' ಎಂದಳು.

'ಅಲ್ಲ ಮೇಡಂ ಕಳೆದ ಎರಡು ವರ್ಷಗಳಿಂದಲೂ 21 ವರ್ಷಗಳೆಂದೇ ಹೇಳುತ್ತೀರಲ್ಲ?' ಎಂದು ಮರು ಪ್ರಶ್ನಿಸಿದಾಗ, ಅದಕ್ಕೆ ಆಕೆ 'ಹೌದು ಆಗಾಗ ಉತ್ತರ ಬದಲಾಯಿಸುವುದಕ್ಕೆ ನಾನೇನು ಗೋಸುಂಬೆಯಲ್ಲ' ಎಂದು ಹೇಳಿ ಆತನನ್ನು ತೆಪ್ಪಗೆ ಮಾಡಿದಳು.!

**ಶಂಕರೇಗೌಡ ತುಂಬಕೆರೆ**

